# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 654 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಾರ್ವಜನಿಕ ವಿತರಣೆ ವ್ಯವಸ್ಥೆ (PDS) ಅಡಿಯಲ್ಲಿ ಪ್ರತಿ ತಿಂಗಳು ಪಡಿತರ ಚೀಟಿದಾರರಿಗೆ ಒಟ್ಟು ಎಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು (ಅಕ್ಕಿ, ಗೋಧಿ, ಬೇಳೆಕಾಳುಗಳು ಇತ್ಯಾದಿ) ವಿತರಿಸಲಾಗುತ್ತಿದೆ; (ಜಿಲ್ಲಾವಾರು ಫಲಾನುಭವಿಗಳ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಪ್ರತಿ ಅಂತ್ಯೋದಯ ಅನ್ನ ಯೋಜನೆ (AAY) ಪಡಿತರ ಚೀಟಿಗೆ 35 ಕೆ.ಜಿ ಆಹಾರ ಧಾನ್ಯಗಳನ್ನು ಪ್ರತಿ ಮಾಹೆ ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 14 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 21 ಕೆ.ಜಿ ರಾಗಿ/ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ಕೇಂದ್ರ ವ್ಯಾಪ್ತಿಯ ಆದ್ಯತಾ ಪಡಿತರ ಚೀಟಿಯ (PHH) ಪ್ರತಿ ಸದಸ್ಯರಿಗೆ ಪ್ರತಿ ಮಾಹೆ 5 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 2 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ ರಾಗಿ ಮತ್ತು ಜೋಳದ ಲಭ್ಯ ಪ್ರಮಾಣದಂತೆ 03 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ರಾಜ್ಯ ವ್ಯಾಪ್ತಿಯ ಆದ್ಯತಾ ಪಡಿತರ ಚೀಟಿಯ (PHH) ಪ್ರತಿ ಸದಸ್ಯರಿಗೆ ರಾಜ್ಯ NFSA ಅಡಿ ಪ್ರತಿ ಮಾಹೆ 5 ಕೆ.ಜಿ ಅಕ್ಕಿಯನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಆನಾಸ 199 ಡಿಆರ್ಎ 2023 ದಿನಾಂಕ: 19.02.2025 ರನ್ವಯ ಪ್ರಸ್ತುತ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ (AAY) ಮತ್ತು ಆದ್ಯತಾ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಹಣವನ್ನು ವರ್ಗಾಯಿಸುವ ಪಕ್ರಿಯೆಯ ಬದಲಾಗಿ ಫೆಬ್ರವರಿ 2025 ರ ಮಾಹೆಯಿಂದ ಅರ್ಹ ಪ್ರತಿ ಫಲಾನುಭವಿಗೆ 05 ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ವಿತರಿಸಲು ಆದೇಶಿಸಲಾಗಿದೆ. ಫಲಾನುಭವಿಗಳ ವಿವರ ಅನುಬಂಧದಲ್ಲಿ ಒದಗಿಸಲಾಗಿದೆ. |

| | | |
|---|---|---|
| ಆ | ಪಡಿತರ ಧಾನ್ಯಗಳ ಗುಣಮಟ್ಟದ ಮಾನದಂಡಗಳು ಯಾವುವು; ಗುಣಮಟ್ಟ ಪರಿಶೀಲನೆ ಎಷ್ಟು ಅವಧಿಗೊಮ್ಮೆ ನಡೆಯುತ್ತದೆ; ಪಡಿತರ ಮೂಲಕ ವಿತರಿಸಲ್ಪಡುವ ಧಾನ್ಯಗಳ ದುರುಪಯೋಗಗೊಂಡ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವ ಬಗ್ಗೆ ಹಾಗೂ ಕೆಲವಡೆ ಖಾಸಗಿ ಅಂಗಡಿಯಲ್ಲಿಯೇ ಪಡಿತರ ಅಂಗಡಿಯಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ಪ್ರಕರಣಗಳೆಷ್ಟು; ಪಡಿತರ ಧಾನ್ಯ ದುರುಪಯೋಗ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013 (NFSA) ಅಡಿ ಪಡಿತರ ಚೀಟಿದಾರರಿಗೆ ಭಾರತೀಯ ಆಹಾರ ನಿಗಮದಿಂದ Quality Control ನಿಂದ ಅನುಮೋದಿತಗೊಂಡ ನಂತರವೇ ಸಗಟು ಮಳಿಗೆಗಳಿಗೆ ಆಹಾರಧಾನ್ಯವನ್ನು ವಿತರಿಸಲಾಗುವುದು. ಪ್ರತಿ ಬಾರಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಗಿ ಮತ್ತು ಜೋಳವನ್ನು ಖರೀದಿ ಕೇಂದ್ರಗಳಲ್ಲಿ ಖರೀದಿಸುವಾಗ ಕೇಂದ್ರ ಸರ್ಕಾರದಿಂದ ನಿಗಧಿಪಡಿಸಿರುವ uniform specifications ನಂತೆ ಕೃಷಿ ಇಲಾಖೆಯ ಗ್ರೇಡರ್‌ಗಳು ಗುಣಮಟ್ಟವನ್ನು ಪರಿಶೀಲಿಸಿ, ನಿಗಧಿತ ಗುಣಮಟ್ಟಕ್ಕೆ ತೃಪ್ತಿಕರವಾದ ನಂತರವೇ ಪಡಿತರ ವಿತರಣೆಗೆ ಪರಿಗಣಿಸಲಾಗುತ್ತಿದೆ.<br><br>ಖರೀದಿ ಕೇಂದ್ರಗಳಲ್ಲಿ ಖರೀದಿಸಲಾದ ರಾಗಿ ಮತ್ತು ಜೋಳದ ದಾಸ್ತಾನನ್ನು ಹಾಳಾಗದಂತೆ ತಡೆಗಟ್ಟಲು ಕಾಲಕಾಲಕ್ಕೆ ಫ್ಯೂಮಿಗೇಷನ್ (Fumigation) ಮಾಡಲಾಗುವುದು ಹಾಗೂ ಕೆ.ಎಫ್.ಸಿ.ಎಸ್.ಸಿ ರವರಿಂದ ಪ್ರತಿ ಮಾಹೆ ಸಗಟು ಮಳಿಗೆಗಳಲ್ಲಿನ ಪಡಿತರವನ್ನು ಅಸ್ಸೇಯರ್ ಮೂಲಕ ಪರಿಶೀಲನೆ ನಡೆಸಲಾಗುವುದು.<br><br>ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟವಾಗುತ್ತಿರುವುದನ್ನು ತಡೆಗಟ್ಟಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.<br><br>➢ ಪಡಿತರ ಅಕ್ಕಿಯ ದುರ್ಬಳಕೆಯನ್ನು ತಡೆಗಟ್ಟಲು ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಾಹಕ ಸಿಬ್ಬಂದಿಗಳಿಗೆ ಕಾಲ ಕಾಲಕ್ಕೆ ಮೇಲ್ವಿಚಾರಣೆ ಮಾಡುವಂತೆ ನಿರ್ದೇಶನ ನೀಡಿ ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ.<br>➢ ಪಡಿತರ ಚೀಟಿದಾರರು ಪಡಿತರ ಅಕ್ಕಿಯನ್ನು ದುರ್ಬಳಕೆ ಮಾಡಿಕೊಂಡ ಪ್ರಕರಣಗಳು ಕಂಡುಬಂದಲ್ಲಿ ಸದರಿ ಪಡಿತರ ಚೀಟಿಗಳನ್ನು ರದ್ದುಪಡಿಸಿ ಅಂತವರ ವಿರುದ್ಧ ನಿಯಾಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ. |

| | | |
|---|---|---|
| | | ➢ ನ್ಯಾಯಬೆಲೆ ಅಂಗಡಿ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಿ ಪಡಿತರ ವಿತರಣೆಯನ್ನು ಪರಿಶೀಲಿಸಲಾಗುತ್ತಿದೆ.<br>➢ ಪ್ರತಿ ಮಾಹೆ ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಆಹಾರ ಅದಾಲತ್ ಗಳನ್ನು ನಡೆಸಿ ಪಡಿತರ ಚೀಟಿದಾರರಿಗೆ ಪಡಿತರ ವಿತರಣೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.<br>➢ ರಾಜ್ಯ ಮಟ್ಟದಲ್ಲಿ ಆಹಾರ ಜಾಗೃತ ದಳ ರಚಿಸಿ ಅಕ್ರಮಗಳ ಬಗ್ಗೆ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.<br>ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟವಾಗುತ್ತಿರುವುದನ್ನು ತಡೆಗಟ್ಟಲು ಅಗತ್ಯ ವಸ್ತುಗಳ ಕಾಯ್ದೆ 1955 ರಡಿ 2025-26ನೇ ಸಾಲಿನ ಜನವರಿ 2026ರ ಅಂತ್ಯದವರೆಗೆ ಒಟ್ಟು 747 ಪ್ರಕರಣಗಳನ್ನು ದಾಖಲಿಸಿ 707 ಆರೋಪಿಗಳನ್ನು ಬಂಧಿಸಲಾಗಿರುತ್ತದೆ ಹಾಗೂ 45,339.39 ಕ್ವಿಂಟಾಲ್ ಆಹಾರ ಧಾನ್ಯ ವಶಪಡಿಸಿಕೊಳ್ಳಲಾಗಿರುತ್ತದೆ. |
| ಇ | ಆಹಾರ ಪದ್ಧತಿಯ ವ್ಯತ್ಯಾಸದಿಂದಾಗಿ ಸ್ಥಳೀಯ ಮಟ್ಟದಲ್ಲಿ ಉಪಯೋಗವಾಗದ ಧಾನ್ಯಗಳನ್ನು ಫಲಾನುಭವಿಗಳು ಖಾಸಗಿ ಅಂಗಡಿಗಳಿಗೆ/ಮಾರುಕಟ್ಟೆಗೆ ಮಾರಾಟ ಮಾಡುತ್ತಿರುವ ಕುರಿತು ಇಲಾಖೆಯಿಂದ ನೈಜತೆ ಪರಿಶೀಲನೆ(Fact Check) ನಡೆಸಲಾಗಿದೆಯೆ; ಲಭ್ಯವಿದ್ದರೆ ವರದಿ ಪ್ರತಿ ನೀಡುವುದು, ಪಡಿತರ ವ್ಯವಸ್ಥೆಯ ಮೂಲಕ ವಿತರಿಸಲಾಗುತ್ತಿರುವ ಧಾನ್ಯಗಳನ್ನು ಬಳಸಲಾಗುತ್ತಿಲ್ಲವೆಂದಾದರೆ ವಿತರಣಾ ವ್ಯವಸ್ಥೆಯ ಔಚಿತ್ಯವೇನು; | ಈ ರೀತಿಯ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಸಾರ್ವಜನಿಕ ವಿತರಣಾ ಪದ್ಧತಿಯಡಿ ಕನಿಷ್ಠ ಬೆಂಬಲ ಯೋಜನೆಯಡಿ ಖರೀದಿಸಲಾಗುತ್ತಿರುವ ರಾಗಿ ಮತ್ತು ಜೋಳವನ್ನು ಲಭ್ಯತೆಗನುಗುಣವಾಗಿ ಆಯಾ ಜಿಲ್ಲೆಯ ಆಹಾರ ಪದ್ಧತಿಗನುಗುಣವಾಗಿ ರಾಗಿಯನ್ನು ಹೆಚ್ಚಾಗಿ ಉಪಯೋಗಿಸುವ ಜಿಲ್ಲೆಗಳಿಗೆ ರಾಗಿಯನ್ನು ಮತ್ತು ಜೋಳವನ್ನು ಹೆಚ್ಚಾಗಿ ಉಪಯೋಗಿಸುವ ಜಿಲ್ಲೆಗಳಿಗೆ ಜೋಳವನ್ನು ವಿತರಣೆ ಮಾಡಲಾಗುತ್ತಿದೆ. |
| ಈ | ಸ್ಥಳೀಯ ಆಹಾರ ಪದ್ಧತಿ ಮತ್ತು ಅಗತ್ಯಗಳಿಗೆ ಅನುಗುಣವಾಗಿ ಸ್ಥಳೀಯವಾಗಿ ಉತ್ಪಾದನೆಯಾಗುವ ಧಾನ್ಯಗಳು ಮತ್ತು ಬೇಳೆಕಾಳುಗಳನ್ನು ವಿತರಿಸಲಾಗುತ್ತಿದೆಯೇ; ಇಲ್ಲದಿದ್ದರೆ, ಅದರ ಕಾರಣವೇನು; | ಸ್ಥಳೀಯ ಅಹಾರ ಪದ್ಧತಿ ಮತ್ತು ಅಗತ್ಯತೆಗಳಿಗೆ ಅನುಗುಣವಾಗಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವ ರಾಗಿ ಮತ್ತು ಜೋಳವನ್ನು ಲಭ್ಯತೆಗನುಗುಣವಾಗಿ ವಿತರಿಸಲಾಗುತ್ತಿದೆ. ಸರ್ಕಾರದ ಆದೇಶ ದಿನಾಂಕ: 24.12.2025 ರಂತೆ ಸಕ್ಕರೆ, ಉಪ್ಪು, ಬೇಳೆಕಾಳು ಮತ್ತು ಅಡುಗೆ ಎಣ್ಣೆ ಒಳಗೊಂಡ ಇಂದಿರಾ ಕಿಟ್ ವಿತರಿಸಲು ಆದೇಶಿಸಲಾಗಿದೆ. |

| | | |
|---|---|---|
| ಉ | ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ಕುಚ್ಚಲಕ್ಕಿಯನ್ನು ಮುಖ್ಯ ಆಹಾರ ಧಾನ್ಯವಾಗಿ ಉಪಯೋಗಿಸುತ್ತಿದ್ದು ಸ್ಥಳೀಯ ಆಗತ್ಯಗಳಿಗೆ ಹೊಂದಿಕೆಯಾಗುವ ರೀತಿಯಲ್ಲಿ ಧಾನ್ಯಗಳ ವಿತರಣೆಯನ್ನು ಪರಿಷ್ಕರಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ (PMGKAY) (Central NFSA)ಯಡಿಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಭಾರತ ಆಹಾರ ನಿಗಮದಿಂದ ಸಾರವರ್ಧಿತ ಅಕ್ಕಿಯನ್ನು ಬಿಡುಗಡೆಗೊಳಿಸುತ್ತಿದ್ದು, ಸದರಿ ಅಕ್ಕಿಯನ್ನು ಹಾಗೂ ರಾಜ್ಯ NFSA ಫಲಾನುಭವಿಗಳಿಗೆ OMSS(D) ಯೋಜನೆಯಡಿ ಬಿಡುಗಡೆ ಮಾಡುವ ಸಾಮಾನ್ಯ ಅಕ್ಕಿಯನ್ನು ಹಂಚಿಕೆ ನೀಡಲಾಗುತ್ತಿದೆ. |

ಇ-ಆನಾಸ 56 ಡಿಆರ್ಎ 2026

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

## FEBRUARY 2026 DISTRICT WISE FOOD GRAINS ALLOTMENT (IN MT)

| Sl No | District Name | No of AAY Cards | No of Total PHH Cards | AAY Member Count | PHH Member Count | CENTRAL NFSA RICE ALLOTMENT | STATE PHH RICE ALLOTMENT | ANNABHAGYA ALLOTMENT | TOTAL FOOD GRAINS ALLOTMENT |
|---|---|---|---|---|---|---|---|---|---|
| 1 | BAGALKOTE | 43300 | 331059 | 181625 | 1321384 | 7396.000 | 0.000 | 6932.000 | 14328.000 |
| 2 | BENGALURU | 11124 | 437596 | 48266 | 1473162 | 6934.000 | 466.000 | 7144.000 | 14544.000 |
| 3 | BANGALORE EAST | 1908 | 68210 | 7975 | 238288 | 1091.000 | 53.000 | 1147.000 | 2291.000 |
| 4 | BANGALORE NORTH | 2326 | 101055 | 9887 | 376236 | 1685.000 | 69.000 | 1853.000 | 3607.000 |
| 5 | BANGALORE SOUTH | 4978 | 97391 | 19660 | 356185 | 1703.000 | 99.000 | 1703.000 | 3505.000 |
| 6 | BANGALORE WEST | 3907 | 163485 | 15404 | 562266 | 2572.000 | 122.000 | 2747.000 | 5441.000 |
| 7 | BENGALURU RURAL | 13770 | 210918 | 59957 | 728703 | 3884.000 | 12.000 | 3646.000 | 7542.000 |
| 8 | BELAGAVI | 66600 | 919782 | 264849 | 3681164 | 18380.000 | 1216.000 | 18212.000 | 37808.000 |
| 9 | BALLARI | 25065 | 256341 | 100811 | 1052832 | 5341.000 | 285.000 | 5300.000 | 10926.000 |
| 10 | BIDAR | 38875 | 245241 | 150614 | 1157676 | 6137.000 | 1005.000 | 6089.000 | 13231.000 |
| 11 | VIJAYAPURA | 39717 | 385394 | 154299 | 1668139 | 8282.000 | 663.000 | 8017.000 | 16962.000 |
| 12 | CHAMARAJANAGARA | 34531 | 236453 | 128765 | 745185 | 4424.000 | 277.000 | 3733.000 | 8434.000 |
| 13 | CHIKKAMAGALURU | 21509 | 220580 | 84435 | 757315 | 4127.000 | 225.000 | 3787.000 | 8139.000 |
| 14 | CHITRADURGA | 40765 | 341907 | 168665 | 1220719 | 6243.000 | 985.000 | 6191.000 | 13419.000 |
| 15 | CHIKKABALLAPURA | 26751 | 261257 | 111313 | 887413 | 4161.000 | 904.000 | 4370.000 | 9435.000 |
| 16 | DAKSHINA KANNADA | 22633 | 212191 | 115398 | 1050209 | 6140.000 | 0.000 | 5551.000 | 11691.000 |
| 17 | DAVANAGERE | 44330 | 282435 | 186524 | 1142636 | 6383.000 | 446.000 | 5784.000 | 12613.000 |
| 18 | DHARWAR | 28981 | 314496 | 115239 | 1275206 | 6704.000 | 563.000 | 6440.000 | 13707.000 |
| 19 | GADAG | 27486 | 210605 | 106604 | 763073 | 4299.000 | 97.000 | 3770.000 | 8166.000 |
| 20 | KALABURAGI | 60520 | 509642 | 233984 | 1849330 | 9295.000 | 1342.000 | 8963.000 | 19600.000 |
| 21 | HASSAN | 22504 | 385298 | 92750 | 1366906 | 7006.000 | 318.000 | 6904.000 | 14228.000 |
| 22 | HAVERI | 45942 | 320551 | 191638 | 1231709 | 7119.000 | 0.000 | 6428.000 | 13547.000 |
| 23 | KODAGU | 8706 | 91675 | 28681 | 296074 | 1386.000 | 197.000 | 1383.000 | 2966.000 |
| 24 | KOLAR | 28495 | 298244 | 116088 | 1082078 | 5378.000 | 613.000 | 5469.000 | 11460.000 |
| 25 | KOPPAL | 35993 | 263855 | 146133 | 1064003 | 5578.000 | 761.000 | 5271.000 | 11610.000 |
| 26 | MANDYA | 33060 | 431618 | 135522 | 1411577 | 7665.000 | 252.000 | 7025.000 | 14942.000 |
| 27 | MYSURU | 48444 | 588678 | 202548 | 2020708 | 10544.000 | 584.000 | 8646.000 | 19774.000 |
| 28 | RAICHUR | 50036 | 391235 | 189170 | 1445660 | 7533.000 | 521.000 | 6811.000 | 14865.000 |
| 29 | RAMANAGARA | 17802 | 263376 | 72490 | 857597 | 3524.000 | 1075.000 | 4152.000 | 8751.000 |
| 30 | SHIVAMOGGA | 36129 | 313456 | 158179 | 1158833 | 5975.000 | 610.000 | 5952.000 | 12537.000 |
| 31 | TUMAKURU | 48458 | 588839 | 196994 | 2045354 | 10028.000 | 2050.000 | 10120.000 | 22198.000 |
| 32 | UDUPI | 27498 | 88475 | 146434 | 680779 | 3908.000 | 286.000 | 3799.000 | 7993.000 |
| 33 | UTTARA KANNADA | 15876 | 281508 | 65618 | 1043504 | 5172.000 | 308.000 | 5194.000 | 10674.000 |
| 34 | YADGIR | 28260 | 239874 | 114337 | 944732 | 4740.000 | 926.000 | 4428.000 | 10094.000 |
| 35 | VIJAYANAGARA | 39787 | 259438 | 162679 | 990726 | 5632.190 | 317.000 | 5011.000 | 10960.190 |
| Total | | 1046066 | 10612158 | 4283535 | 39947361 | 206369.190 | 17647.000 | 197972.000 | 421988.190 |

Commissioner,
Food, Civil Supplies and Consumers
Affairs Department, Bangalore.